SHREE
Mahalakshmi
SWEETS
ಮೈಸೂರು
೨ನೇ ಮೈನ್, ವಿದ್ಯಾರಣ್ಯಪುರಂ. ☎ 2482067
[illegible] ☎ 2443663
[illegible] ☎ 4266670
[illegible] ☎ 2341067
[illegible] ☎ 2443067
[illegible] ☎ 2411067
[illegible] ☎ 2430067
ಮಂಡ್ಯ : [illegible] ☎ 400047

ಆಂದೋಲನ
ದಿನಪತ್ರಿಕೆ
ಸಂಪಾದಕ : ರಾಜಶೇಖರ ಕೋಟಿ

ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ
ಗ್ಯಾಸ್‌ಸೇಫ್ ಇಂಡಿಯಾ ಲಿ., ಪುಣೆ
(ISO 9001-2008 Company)
ಇದರ ಅಡುಗೆ ಅನಿಲದ (Gas Cylinder) ಅಪಾಯಕ್ಕೆ ರಕ್ಷಾ ಕವಚವಾಗಿ ಮತ್ತೊಂದು ಅದ್ಭುತ ಆವಿಷ್ಕಾರ ನೂತನ ತಂತ್ರಜ್ಞಾನದ ಗ್ಯಾಸ್‌ಫ್ಯೂಸ್ (Gas Fuse). ಇದರ ಕರ್ನಾಟಕ ರಾಜ್ಯದ ಏಕೈಕ ವಿತರಕರಾದ
ಎಸ್.ಎಲ್.ಡಿ. ಎಂಟರ್‌ಪ್ರೈಸಸ್ ಬೆಂಗಳೂರು
(3rd ಸ್ಟೇಜ್, ಮಂಕಿ ಪಾರ್ಕ್ ಹತ್ತಿರ, ಶಾರದಾ ಕಾಲೋನಿ, ಬಸವೇಶ್ವರ ನಗರ) ಇವರಿಗೆ ಮೈಸೂರು ಜಿಲ್ಲೆಯಾದ್ಯಂತ ಸ್ವಇಚ್ಛೆಯವಾಗಿ ಕೆಲಸ ಮಾಡಲು ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ.
ಆಕರ್ಷಕ ಸಂಬಳ ಮತ್ತು ಇನ್‌ಸೆಂಟಿವ್ ಇರುತ್ತದೆ.
GASFUSE ಸಂಪರ್ಕಿಸಿ: ಮಲ್ಲಿಕಾರ್ಜುನ 90727 26650 | ವಿಶ್ವನಾಥ 99161 11076

ಕಾಶ್ಮೀರಿಗರ ವಿಶ್ವಾಸ ಗಳಿಸಲು ಸರ್ಕಾರ ಯತ್ನಿಸುತ್ತಿದೆ. ಜಮ್ಮು–ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಎಲ್ಲ ರಾಜಕೀಯ ಪಕ್ಷಗಳೂ ಬೆಂಬಲಿಸಬೇಕು ಎಂದು ಕೇಂದ್ರ ಗೃಹ ಸಚಿವ ರಾಜನಾಥ ಸಿಂಗ್ ಮಂಗಳವಾರ ಮನವಿ ಮಾಡಿದ್ದಾರೆ.

ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಸಹಕಾರ ಅಗತ್ಯ

ಯಕ್ಷಗಾನದಲ್ಲಿ ಶಕಟಾಸುರ ವೇಷ ಆವೇಶ

ಮೈಸೂರಿನ ಶ್ರೀಕೃಷ್ಣಧಾಮ ಸಭಾಭವನದಲ್ಲಿ ಬೆಳ್ಳಿಪ್ಪಾಡಿ ಯಕ್ಷ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ಯಕ್ಷಗಾನದಲ್ಲಿ ಶ್ರೀಕೃಷ್ಣ ಜನ್ಮ ಶಕಟಾಸುರ ವಧೆ ಪ್ರಸಂಗದ ವೇಷಧಾರಿ ಕಂಡಿದ್ದು ಹೀಗೆ.

ಗರಿಷ್ಠ: ೨೭° । ಕನಿಷ್ಠ: ೧೭°
ಮೋಡಕವಿದ ವಾತಾವರಣ ಸಾಧಾರಣ ಮಳೆ ಸಂಭವ

ಸಂಪುಟ: ೪೬ ಸಂಚಿಕೆ: ೨೪೭, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೨೩ ● ನವಮಿ– ಆರ್ದ್ರಾ, ಗುರುವಾರ, ಸೆ.೧೪, ೨೦೧೭, ದೂರವಾಣಿ: ೨೪೪೯೫೦೧, ೨೪೪೯೫೦೪, ೨೪೪೯೫೦೫, ಫ್ಯಾಕ್ಸ್: ೨೪೪೯೫೦೩, ಪುಟ: ೧೨, ರೂ. ೩

ಇಂಗದ ತಮಿಳುನಾಡಿನ ದಾಹ

ಸುಪ್ರೀಂನಲ್ಲಿ ಮುಂದುವರಿದ ಕಾವೇರಿ ವಿಚಾರಣೆ; ಹೆಚ್ಚು ನೀರು ಹರಿಸುವಂತೆ ತ.ನಾಡು ತಗಾದೆ

ಕೆಆರ್‌ಎಸ್

ಜಲಾಶಯದ ಸಂಗ್ರಹ ಮಟ್ಟ	೧೨೪.೮೦ ಅಡಿ
ಸೆ.೧೩ರ ನೀರಿನ ಮಟ್ಟ	೧೦೪.೪೦ ಅಡಿ
ಸದ್ಯದ ನೀರಿನ ಸಂಗ್ರಹ	೨೬.೩೫೦ ಟಿಎಂಸಿ
ಒಳಹರಿವು	೬೫೫೧ ಕ್ಯೂಸೆಕ್ಸ್
ಹೊರಹರಿವು	೪೯೧೨ ಕ್ಯೂಸೆಕ್ಸ್

ಹೊಸದಿಲ್ಲಿ,ಸೆ.೧೩– ತಮಿಳುನಾಡಿಗೆ ನಿತ್ಯ ೨ ಸಾವಿರ ಕ್ಯೂಸೆಕ್ಸ್ ನೀರು ಹರಿಸಿ ಎಂದು ನ್ಯಾಯಾಲಯ ಆದೇಶಿಸಿದ್ದರೂ ಪ್ರಸ್ತುತ ಕರ್ನಾಟಕ ಕೆಆರ್‌ಎಸ್‌ನಿಂದ ಹೆಚ್ಚಿನ ಪ್ರಮಾಣದಲ್ಲಿಯೇ ನೀರು ಬಿಡುತ್ತಿದೆ. ಹಾಗಿದ್ದರೂ ಕಾವೇರಿ ನೀರಿಗಾಗಿ ತಮಿಳುನಾಡಿನ ದಾಹ ಕಡಿಮೆ ಆಗುತ್ತಲೇ ಇಲ್ಲ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ಬೇಕು ಎಂದು ತಮಿಳುನಾಡು ಮೊಂಡು ಹಿಡಿಯುತ್ತಿದೆ.

ಕರ್ನಾಟಕದಲ್ಲಿ ಉತ್ತಮ ಮಳೆಯಾಗುತ್ತಿದ್ದು ಕಾವೇರಿ ನದಿಯಲ್ಲಿ ಅಧಿಕವಾಗಿ ನೀರು ಹರಿಯುತ್ತಿದೆ. ಕೃಷ್ಣರಾಜ ಸಾಗರ ಜಲಾಶಯದ ನೀರಿನ ಮಟ್ಟದಲ್ಲಿಯೂ ಏರಿಕೆಯಾಗಿದೆ. ಹಾಗಾಗಿ, ತಮಿಳುನಾಡಿಗೆ ಮತ್ತಷ್ಟು ನೀರು ಹರಿಸಲು ನಿರ್ದೇಶನ ನೀಡುವಂತೆ ತಮಿಳುನಾಡಿನ ವಕೀಲರು ಸರ್ವೋಚ್ಚ ನ್ಯಾಯಾಲಯದಲ್ಲಿ ಬುಧವಾರ ಸಲ್ಲಿಸಿದ ಮನವಿಗೆ ಕರ್ನಾಟಕದ ವಕೀಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಕರ್ನಾಟಕ ಮತ್ತು ತಮಿಳುನಾಡು ನಡುವೆ ಶತಮಾನದಿಂದಲೂ ಉದ್ಭವಿಸಿರುವ ಕಾವೇರಿ ಜಲ ವಿವಾದ ಇತ್ಯರ್ಥಕ್ಕಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿಯ ವಿಚಾರಣೆ ಮತ್ತೆ ಬುಧವಾರದಿಂದ ಮುಂದುವರಿದಿದೆ. ಉಭಯ ರಾಜ್ಯಗಳ ವಕೀಲರೂ ವಾದ–ಪ್ರತಿವಾದ ಮಂಡಿಸಿದರು.

ಕಾವೇರಿ ಜಲವಿವಾದ ನ್ಯಾಯಾಧಿಕರಣ (ಸಿಡಬ್ಲ್ಯುಡಿಟಿ) ೨೦೦೭ರಲ್ಲಿ ನೀಡಿದ ಅಂತಿಮ ತೀರ್ಪಿನ ವಿರುದ್ಧ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಗಳನ್ನು ಸಲ್ಲಿಸಿದ್ದು, ಜು.೧೧ರಿಂದ ಅಂತಿಮ ವಿಚಾರಣೆ ಆರಂಭಗೊಂಡಿತು.

ಬುಧವಾರ ವಾದ ಮಂಡಿಸಿದ ತಮಿಳುನಾಡಿನ ವಕೀಲರು, ಮೆಟ್ಟೂರು ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆ ಇದೆ. ರೈತರ ಬೆಳೆಗಳಿಗೆ ನೀರಿಲ್ಲದೆ ತೊಂದರೆಯಾಗಿದೆ. ಹೀಗಾಗಿ ಒಪ್ಪಂದ ಹಾಗೂ ನ್ಯಾಯಾಧಿಕರಣದ ಆದೇಶದಂತೆ ನೀರು ಹರಿಸಲು ಕರ್ನಾಟಕಕ್ಕೆ ಸೂಚಿಸಬೇಕು.

⏭ ೮

- ಕಾವೇರಿ ಕೊಳ್ಳದಲ್ಲಿ ಉತ್ತಮ ಮಳೆಯಾಗಿ ಕೆಆರ್‌ಎಸ್‌ಗೆ ಭಾರೀ ನೀರು ಹರಿದುಬರುತ್ತಿದೆ. ಹಾಗಾಗಿ ಹೆಚ್ಚು ನೀರು ಬಿಡಲು ಆದೇಶಿಸಿ: ತಮಿಳುನಾಡು
- ೩ ವರ್ಷಗಳ ಸತತ ಬರದಿಂದ ಕಾವೇರಿ ವ್ಯಾಪ್ತಿ ರೈತರು ಕಂಗೆಟ್ಟಿದ್ದಾರೆ. ಅಲ್ಲದೇ ಕೆಆರ್‌ಎಸ್‌ಗೆ ನಿರೀಕ್ಷಿಸಿದ ಪ್ರಮಾಣದಲ್ಲಿ ನೀರು ಬರುತ್ತಿಲ್ಲ: ಕರ್ನಾಟಕ

ಮಂಡ್ಯದ ನಾಲೆಗಳಿಗೆ ಹರಿದ ನೀರು

ಕಟ್ಟು ಪದ್ಧತಿಯಡಿ ೧೫ ದಿನಗಳ ಅವಧಿಗೆ ನೀರು ಬಿಡುಗಡೆ

ಮಂಡ್ಯ,ಸೆ.೧೩– ಕೆಆರ್‌ಎಸ್ ಅಣೆಕಟ್ಟೆಯಿಂದ ಜಿಲ್ಲೆಯ ನಾಲೆಗಳಿಗೆ ಬುಧವಾರ ಬೆಳಿಗ್ಗೆಯಿಂದ ನೀರು ಬಿಡಲಾಗಿದೆ.

ಕಳೆದ ವಾರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಕೃಷ್ಣಪ್ಪ ನೇತೃತ್ವದಲ್ಲಿ ನಡೆದಿದ್ದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನದಂತೆ ಕೆಆರ್‌ಎಸ್ ಅಣೆಕಟ್ಟೆಯಿಂದ ವಿಸಿ ನಾಲೆ, ವರುಣಾ, ಬಲದಂಡೆ, ಎಡದಂಡೆ, ವಿರಿಜಾ, ದೇವರಾಯ ಸೇರಿದಂತೆ ಎಲ್ಲಾ ನಾಲೆಗಳಿಗೆ ನೀರು ಹರಿಸಲಾಗುತ್ತಿದೆ.

ಸಭೆಯ ನಿರ್ಣಯದಂತೆ ೧೫ ದಿನಗಳು ನೀರು ಬಿಡುವುದು, ೧೫ ದಿನ ನೀರು ತಪ್ಪಿಸುವ ಕಟ್ಟು ಪದ್ಧತಿಯಲ್ಲಿ ನೀರು ಹರಿಸಲಾಗುತ್ತಿದೆ.

೧೨೪.೮೦ ಅಡಿ ಗರಿಷ್ಠ ನೀರು ಸಂಗ್ರಹ ಸಾಮರ್ಥ್ಯದ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಪ್ರಸ್ತುತ ೧೦೪.೪೦ ಅಡಿ ನೀರಿನ ಸಂಗ್ರಹವಿದೆ. ೬೫೫೧ ಕ್ಯೂಸೆಕ್ಸ್ ಒಳಹರಿವಿದ್ದರೆ, ೪೯೧೨ ಕ್ಯೂಸೆಕ್ಸ್ ನೀರನ್ನು ಹೊರಬಿಡಲಾಗುತ್ತಿದೆ.

ನಾಲೆಗೆ ನೀರು ಬಿಟ್ಟಿರುವುದರಿಂದ ನೀರಾವರಿ ಪ್ರದೇಶದ ಜಮೀನುಗಳಲ್ಲಿ ಭತ್ತ ನಾಟಿ ಕಾರ್ಯ ಚುರುಕಾಗಲಿದೆ. ಹಲವು ಕೆರೆಕಟ್ಟೆಗಳೂ ಈಗಲೂ ಖಾಲಿ ಇದ್ದು, ಈಗ ನಾಲೆಗಳಲ್ಲಿ ನೀರು ಬರುತ್ತಿರುವುದರಿಂದ ಕೆರೆಗಳು ಭರ್ತಿಯಾಗುವ ನಿರೀಕ್ಷೆ ಇದೆ. ಆ ಮೂಲಕ ಜಿಲ್ಲೆಯ ಗ್ರಾಮೀಣ ಪ್ರದೇಶದ ನೀರಿನ ಸಮಸ್ಯೆ ನಿವಾರಣೆಯಾಗುವ ವಿಶ್ವಾಸ ವ್ಯಕ್ತವಾಗಿದೆ.

ಮಂಡ್ಯ, ಚಾ.ನಗರಕ್ಕೆ ವರ್ತುಲ ರಸ್ತೆ ಭಾಗ್ಯ

ಯೋಜನಾ ವ್ಯಾಪ್ತಿಗೆ ೨೫ ಜಿಲ್ಲಾ ಕೇಂದ್ರ

೨೭೫ ಕೋಟಿ ರೂ. ಯೋಜನೆಗೆ ಸಂಪುಟ ಅಸ್ತು

ಬೆಂಗಳೂರು,ಸೆ.೧೩– ಮಂಡ್ಯ, ಚಾಮರಾಜನಗರ ಸೇರಿದಂತೆ ರಾಜ್ಯದ ೨೫ ಜಿಲ್ಲಾ ಕೇಂದ್ರಗಳಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ದೃಷ್ಟಿಯಿಂದ ವರ್ತುಲ ರಸ್ತೆಗಳನ್ನು ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಬುಧವಾರ ನಡೆದ ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿ ನಡೆಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ. ಜಯಚಂದ್ರ ಅವರು ಈ ವಿಷಯ ತಿಳಿಸಿದರು. ದೂರಗಾಮಿ ಪ್ರಯೋಜನದ ಈ ಯೋಜನೆಗೆ ೨೭೫ ಕೋಟಿ ರೂ.ಗಳನ್ನು ಒದಗಿಸಲು ಸಚಿವ ಸಂಪುಟ ಸಭೆ ಸಮ್ಮತಿಸಿದೆ ಎಂದು ವಿವರಿಸಿದರು.

ಇದೇ ವಿಚಾರವಾಗಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು, ಜಿಲ್ಲಾ ಕೇಂದ್ರಗಳಲ್ಲಿ ವರ್ತುಲ ರಸ್ತೆ ನಿರ್ಮಿಸುವುದಕ್ಕೆ ಸಂಬಂಧಿಸಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

⏭ ೮

- ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚನೆ
- ಸಮಿತಿಯಲ್ಲಿ ಹಣಕಾಸು, ಪಿಡಬ್ಲ್ಯುಡಿ, ಪೌರಾಡಳಿತ ಇಲಾಖೆ ಅಧಿಕಾರಿಗಳು
- ೫ ವರ್ಷಗಳಲ್ಲಿ ಹಂತಹಂತವಾಗಿ ವರ್ತುಲ ರಸ್ತೆ ನಿರ್ಮಾಣ ಆರಂಭ

ಪಾತಕಿ ದಾವೂದ್‌ಗೆ ಬ್ರಿಟನ್ ಬಿಗ್ ಶಾಕ್

ಭಾರತದ ಮನವಿ ಮೇರೆಗೆ ಬ್ರಿಟನ್‌ನ ವಿವಿಧೆಡೆ ೪೫ ಸಾವಿರ ಕೋಟಿ ರೂ. ಆಸ್ತಿ ವಶ

ಲಂಡನ್,ಸೆ.೧೩– ಮುಂಬೈ ಸರಣಿ ಸ್ಫೋಟ ಸೇರಿದಂತೆ ಹಲವು ಅಪರಾಧ ಪ್ರಕರಣಗಳಲ್ಲಿ ಭಾರತಕ್ಕೆ ಬೇಕಾಗಿರುವ ಭೂಗತ ಪಾತಕಿ ದಾವೂದ್ ಇಬ್ರಾಹಿಂಗೆ ಬ್ರಿಟನ್ ಸರ್ಕಾರ ದೊಡ್ಡ ಪೆಟ್ಟು ನೀಡಿದೆ. ದಾವೂದ್‌ಗೆ ಸೇರಿದ ೪೫ ಸಾವಿರ ಕೋಟಿ ರೂ. ಮೌಲ್ಯದ ಆಸ್ತಿಯನ್ನು ಬ್ರಿಟನ್ ಸರ್ಕಾರ ಬುಧವಾರ ವಶಪಡಿಸಿಕೊಂಡಿದೆ.

ಭಾರತದ ವಿವಿಧೆಡೆ ಹಾಗೂ ದುಬೈ ಸೇರಿದಂತೆ ಕೊಲ್ಲಿ ರಾಷ್ಟ್ರಗಳಲ್ಲಿ ದಾವೂದ್ ಇಬ್ರಾಹಿಂ ಹೊಂದಿದ್ದ ಆಸ್ತಿ–ಪಾಸ್ತಿಗಳನ್ನು ಭಾರತ ಸರ್ಕಾರ ಜಪ್ತಿ ಮಾಡಿದ ಬೆನ್ನಲ್ಲೇ ಪಾತಕಿಯ ವಿರುದ್ಧ ಬ್ರಿಟನ್‌ನಲ್ಲಿಯೂ ದೊಡ್ಡ ಮಟ್ಟದಲ್ಲಿಯೇ ಕಾನೂನು ಕ್ರಮ ಜರುಗಿದೆ.

ಭಾರತ ಸರ್ಕಾರದ ಮನವಿಯ ಮೇರೆಗೆ ಬ್ರಿಟನ್ ಸರ್ಕಾರ ಮಹತ್ವದ ಕ್ರಮ ಜರುಗಿಸಿದೆ. ಲಂಡನ್‌ನ ವಾರ್ವಿಕ್ ಷೆರ್, ಮಿಡ್‌ಲ್ಯಾಂಡ್, ಬರ್ಮಿಂಗ್ ಹ್ಯಾಮ್‌ನಲ್ಲಿರುವ ೬.೭ ಶತಕೋಟಿ ಅಮೆರಿಕನ್ ಡಾಲರ್ ಮೌಲ್ಯದ (೪೫ ಸಾವಿರ ಕೋಟಿ ರೂ.) ಹೋಟೆಲ್, ಮನೆ ಸೇರಿದಂತೆ ಹಲವು ಸ್ಥಿರಾಸ್ತಿಗಳನ್ನು ಜಪ್ತಿ ಮಾಡಲಾಗಿದೆ. ಇದರಿಂದ ಭಾರತಕ್ಕೆ ದೊಡ್ಡ ರಾಜತಾಂತ್ರಿಕ ಗೆಲುವು ಸಿಕ್ಕಂತಾಗಿದೆ.

೧೯೯೩ರ ಮುಂಬೈ ಸರಣಿ ಬಾಂಬ್ ಸ್ಫೋಟದ ಪ್ರಮುಖ ಆರೋಪಿಯಾದ ದಾವೂದ್ ಇಬ್ರಾಹಿಂ, ಪಾಕಿಸ್ತಾನದಲ್ಲಿ ತಲೆಮರೆಸಿಕೊಂಡಿದ್ದಾನೆ. ಆತನ ಆಸ್ತಿಗಳ ವಶಕ್ಕೆ ಭಾರತದ ಜಾರಿ ನಿರ್ದೇಶನಾಲಯ ೨೦೧೫ರಲ್ಲಿ ಬ್ರಿಟನ್ ಸರ್ಕಾರಕ್ಕೆ ಮನವಿ ಮಾಡಿತ್ತು.

ಇನ್ನೂ ೧೬ ದೇಶಗಳಲ್ಲಿ ದಾವೂದ್ ಆಸ್ತಿಗಳನ್ನು ಹೊಂದಿರುವ ಬಗ್ಗೆ ಜಾರಿ ನಿರ್ದೇಶನಾಲಯ ಮಾಹಿತಿ ಕಲೆ ಹಾಕಿದೆ.

⏭ ೮

- ೨೦೧೫ರಲ್ಲಿ ಭಾರತ ಸಲ್ಲಿಸಿದ್ದ ಮನವಿ ಮೇರೆಗೆ ಬ್ರಿಟನ್ ಕ್ರಮ
- ಭಾರತ, ದುಬೈ ಬಳಿಕ ಬ್ರಿಟನ್‌ನಲ್ಲಿ ಭೂಗತ ಪಾತಕಿ ಆಸ್ತಿ ವಶ
- ಇನ್ನೂ ೧೬ ದೇಶಗಳಲ್ಲಿರುವ ಆಸ್ತಿಗಳ ವಶಕ್ಕೆ ಜಾರಿ ನಿರ್ದೇಶನಾಲಯ ಯತ್ನ

ಡಿಕೆಶಿಗೆ ಇಡಿ ಕಚೇರಿ ಕರೆ; ನೋಟಿಸ್ ಜಾರಿ ಸಂಭವ

ಬೆಂಗಳೂರು,ಸೆ.೧೩– ಇಂಧನ ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ಜಾರಿ ನಿರ್ದೇಶನಾಲಯದಿಂದ ನೋಟಿಸ್ ಜಾರಿಯಾಗುವ ಸಂಭವವಿದೆ. ಇದು ಆದಾಯ ತೆರಿಗೆ ದಾಳಿ ನಂತರದ ಬೆಳವಣಿಗೆ ಎನ್ನಲಾಗಿದೆ.

ಜಾರಿ ನಿರ್ದೇಶನಾಲಯದಿಂದ ಕರೆ ಬಂದಿರುವುದನ್ನು ಸ್ವತಃ ಡಿ.ಕೆ.ಶಿವಕುಮಾರ್ ಅವರೇ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಸ್ಪಷ್ಟಪಡಿಸಿದರಲ್ಲದೆ, ಮಂಗಳವಾರ ಕರೆ ಮಾಡಿದವರು ಜಾರಿ ನಿರ್ದೇಶನಾಲಯದಿಂದ ಮಾತನಾಡುತ್ತಿರುವುದಾಗಿ ತಿಳಿಸಿದರು. ನಂತರ ಅದೇ ದೂರವಾಣಿ ಸಂಖ್ಯೆಗೆ ನಾನು ಕರೆ ಮಾಡಿ ವಿಚಾರಿಸಿದೆ. ಅದು ಜಾರಿ ನಿರ್ದೇಶನಾಲಯದ್ದೇ ಕರೆ ಎಂಬುದು ಖಚಿತವಾಯಿತು ಎಂದು ವಿವರಿಸಿದರು.

⏭ ೮

ಕಲಬುರ್ಗಿ, ಗೌರಿ ಹತ್ಯೆ ಪಿಸ್ತೂಲ್ ಒಂದೇ

ವಿಶೇಷ ತನಿಖಾ ತಂಡಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ

ಬೆಂಗಳೂರು,ಸೆ.೧೩– ಅಂತಾರಾಷ್ಟ್ರೀಯ ಮಟ್ಟದಲ್ಲೂ ಭಾರೀ ಸದ್ದು ಮಾಡಿರುವ ಪತ್ರಕರ್ತೆ ಗೌರಿ ಲಂಕೇಶ್ ಹತ್ಯಾ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ)ಕ್ಕೆ ಮಹತ್ವದ ಸುಳಿವು ಲಭ್ಯವಾಗಿದೆ.

೨ ವರ್ಷಗಳ ಹಿಂದೆ ಧಾರವಾಡದಲ್ಲಿ ಹಿರಿಯ ಸಾಹಿತಿ ಎಂ.ಎಂ.ಕಲಬುರ್ಗಿ ಅವರ ಹತ್ಯೆಗೆ ಬಳಸಿದ್ದ ಮಾದರಿ ಪಿಸ್ತೂಲನ್ನೇ ಗೌರಿ ಲಂಕೇಶ್ ಹತ್ಯೆಗೂ ಹಂತಕರು ಬಳಸಿರುವುದು ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ವರದಿಯಿಂದ ಖಚಿತವಾಗಿದೆ. ಕಳೆದ ಮಂಗಳವಾರ ಗೌರಿ ಲಂಕೇಶ್ ಅವರ ಹತ್ಯೆಯಾದ ಬಳಿಕ ಸ್ಥಳದಲ್ಲಿ ಕಾರ್ಟ್ರಿಡ್ಜ್, ಗೋಡೆಯಲ್ಲಿ ಹೊಕ್ಕಿದ್ದ ಗುಂಡು ಸೇರಿದಂತೆ ಹಲವು ಸಾಕ್ಷ್ಯಗಳನ್ನು ಎಫ್‌ಎಸ್‌ಎಲ್ ಸಂಗ್ರಹಿಸಿತ್ತು.

⏭ ೮

‘ಗೌರಿ ಲಂಕೇಶ್’ ಪತ್ರಿಕೆಗೆ ಇಂದಿರಾ, ಕವಿತಾ ಸಾರಥ್ಯ

ಬೆಂಗಳೂರು: ಗೌರಿ ಹತ್ಯೆ ನಂತರ ‘ಗೌರಿ ಲಂಕೇಶ್’ ಪತ್ರಿಕೆ ಇತಿಹಾಸದ ಪುಟ ಸೇರುತ್ತದೆಯೇನೋ ಎಂಬ ಆತಂಕ ದೂರವಾಗಿದೆ. ಪತ್ರಿಕೆ ಸ್ಥಗಿತಗೊಳ್ಳಲು ಬಿಡಬಾರದು ಎಂದು ಹಲವರು ಸಲಹೆ ನೀಡಿದ ಪರಿಣಾಮ ಈಗ ಕವಿತಾ ಲಂಕೇಶ್ ಅವರು ಪತ್ರಿಕೆಯ ನಿರ್ವಹಣೆ ವಹಿಸಿಕೊಳ್ಳಲು ಆಸಕ್ತಿ ತೋರಿದ್ದಾರೆ.

ತಾಯಿ ಇಂದಿರಾ ಅವರ ಸಾರಥ್ಯದಲ್ಲಿ ಪತ್ರಿಕೆಯನ್ನು ಕವಿತಾ ಮುನ್ನಡೆಸಲಿದ್ದಾರೆ. ದೇಶ ವಿದೇಶಗಳಿಂದ ಬಂದ ಪ್ರತಿಕ್ರಿಯೆಯಿಂದ ಕವಿತಾ ಉತ್ತೇಜಿತರಾಗಿದ್ದಾರೆ.

ಪೊಲೀಸ್ ಸಮಕ್ಷಮ ಮರ ಹನನ; ಆರೋಪ

- ವಾಹನ, ಮರದ ತುಂಡು ಅರಣ್ಯ ಇಲಾಖೆ ವಶ
- ಮೂವರ ವಿರುದ್ಧ ಪ್ರಕರಣ ದಾಖಲು

ಮೈಸೂರು,ಸೆ.೧೩– ಅರಣ್ಯ ಇಲಾಖೆ ಅನುಮತಿ ಪಡೆಯದೇ ಪೊಲೀಸರೇ ಮುಂದೆ ನಿಂತು ಹತ್ತಾರು ಮರಗಳ ಹನನ ಮಾಡಿರುವ ಆರೋಪ ಕೇಳಿಬಂದಿದ್ದು, ಮೂವರ ವಿರುದ್ಧ ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ.

ನಗರದ ಚಾಮುಂಡಿಬೆಟ್ಟ ತಪ್ಪಲಿನಲ್ಲಿರುವ ನಗರ ಪೊಲೀಸ್ ಕವಾಯತು ಮೈದಾನ ಸಮೀಪದ ಫೈರಿಂಗ್ ರೇಂಜ್ ಬಳಿ ಇದ್ದ ಕಾಡುಮರಗಳನ್ನು ಪೊಲೀಸರ ಸಮ್ಮುಖದಲ್ಲಿಯೇ ಕಡಿಸಲಾಗಿದೆ. ಈ ಬಗ್ಗೆ ಪರಿಸರವಾದಿಗಳಿಗೆ ಮಾಹಿತಿ ಬಂದಿದೆ (ಮಾಹಿತಿ ನೀಡಿದವರೂ ಕೆಲ ಪರಿಸರ ಪ್ರಿಯ ಪೊಲೀಸರೆ!).

ಮರ ಹನನದ ಸುದ್ದಿ ತಿಳಿದ ನಂತರ ಮಂಗಳವಾರ ಸಂಜೆ ಸಿಎಆರ್ ಮೈದಾನದ ಬಳಿಗೆ ತೆರಳಿದ ಪರಿಸರವಾದಿಗಳು, ಮರದ ತುಂಡುಗಳನ್ನು ತುಂಬಿಕೊಂಡು ಬರುತ್ತಿದ್ದ ಈಷರ್ ವಾಹನವನ್ನು ತಡೆಹಿಡಿದು ಪರಿಶೀಲಿಸಿದ್ದಾರೆ. ವಾಹನದಲ್ಲಿ ಹುಣಸೆ, ನೀಲಗಿರಿ ಹಾಗೂ ಅಕೇಷಿಯಾ ಮರಗಳ ತುಂಡುಗಳು ಪತ್ತೆಯಾಗಿವೆ. ಕೂಡಲೇ ಅವರು ಅರಣ್ಯಾಧಿಕಾರಿಗಳಿಗೆ ವಿಚಾರ ಮುಟ್ಟಿಸಿದ್ದಾರೆ.

ಸ್ಥಳಕ್ಕೆ ಬಂದ ವಲಯ ಅರಣ್ಯಾಧಿಕಾರಿ ದೇವರಾಜು ಅವರು, ವಾಹನ ಚಾಲಕ ಹಾಗೂ ಮರ ಕಡಿದಿದ್ದಾರೆ ಎನ್ನಲಾದ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಮರದ ತುಂಡುಗಳ ಸಮೇತ ವಾಹನವನ್ನು ವಶಕ್ಕೆ ಪಡೆದು ಅರಣ್ಯ ಭವನಕ್ಕೆ ಕೊಂಡೊಯ್ದಿದ್ದಾರೆ.

ಫೈರಿಂಗ್ ರೇಂಜ್ ಆವರಣದಲ್ಲಿದ್ದ ಹುಣಸೆ, ನೀಲಗಿರಿ ಹಾಗೂ ಅಕೇಷಿಯಾ ಮರಗಳನ್ನು ಕಡಿಯಲಾಗಿದೆ. ಮರ ಕಡಿಯುವುದಕ್ಕೆ ಇಲಾಖೆಯಿಂದ ಅನುಮತಿ ಪಡೆದಿಲ್ಲ. ಈ ಬಗ್ಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಲಾಗಿದೆ.

ಮರ ಕಡಿತಕ್ಕೆ ಅನುಮತಿ ಪಡೆದಿರುವುದೇ ಆದರೆ ಸೂಕ್ತ ದಾಖಲೆಗಳನ್ನು ಒದಗಿಸುವಂತೆ ಸೂಚಿಸಲಾಗಿದೆ. ದಾಖಲೆ ಒದಗಿಸದೇ ಇದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯಾಧಿಕಾರಿ ದೇವರಾಜು ತಿಳಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ನಗರ ಪೊಲೀಸ್ ಆಯುಕ್ತ ಡಾ.ಎ.ಸುಬ್ರಹ್ಮಣ್ಯೇಶ್ವರರಾವ್, ಮೈದಾನದಲ್ಲಿದ್ದ ಯಾವುದೇ ಮರಗಳನ್ನು ಕಡಿಯಲಾಗಿಲ್ಲ. ಈ ಹಿಂದೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆದೇ ಕಡಿದಿಟ್ಟಿದ್ದ ಮರದ ತುಂಡುಗಳನ್ನು ವಾಹನದಲ್ಲಿ ಸಾಗಿಸಲಾಗುತ್ತಿತ್ತು. ಮಾಹಿತಿ ಕೊರತೆಯಿಂದ ಈ ಘಟನೆ ನಡೆದಿದೆ. ಅರಣ್ಯಾಧಿಕಾರಿಗಳ ಜತೆ ಮಾತುಕತೆ ನಡೆಸುವೆ ಎಂದರು.

೧ರಿಂದ ೧೨ನೇ ತರಗತಿವರೆಗೆ ತೆಲುಗು ಭಾಷೆ ಕಡ್ಡಾಯ

ಹೈದರಾಬಾದ್,ಸೆ.೧೩– ತೆಲಂಗಾಣದ ಎಲ್ಲಾ ಶಾಲೆಗಳಲ್ಲಿ ೧ರಿಂದ ೧೨ನೇ ತರಗತಿವರೆಗೆ ತೆಲುಗು ಕಲಿಕೆ ಕಡ್ಡಾಯಗೊಳಿಸಲಾಗಿದೆ.

ತೆಲಂಗಾಣದ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ತೆಲುಗು ಕಲಿಕೆ ಕಡ್ಡಾಯ ನಿಯಮ ೨೦೧೮–೧೯ರ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರಲಿದೆ.

ಒಂದೊಮ್ಮೆ ಯಾವುದಾದರೂ ಶಾಲೆ ತೆಲುಗು ಕಡ್ಡಾಯ ನಿಯಮವನ್ನು ಜಾರಿಗೆ ತರದೇ ಇದ್ದರೆ ಆ ಶಾಲೆಯ ಮಾನ್ಯತೆಯನ್ನು ನಿರ್ದಾಕ್ಷಿಣ್ಯವಾಗಿ ರದ್ದುಪಡಿಸಲಾಗುವುದು ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಹೇಳಿದ್ದಾರೆ.

ರಾಜಧಾನಿಯಲ್ಲಿ ವಿಶ್ವ ತೆಲುಗು ಸಮ್ಮೇಳನಕ್ಕೆ ನಡೆದಿರುವ ಸಿದ್ಧತೆಗಳನ್ನು ಮಂಗಳವಾರ ಪರಿಶೀಲಿಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದ ಶಾಲೆಗಳಲ್ಲಿ ತೆಲುಗು ಕಲಿಕೆ ಕಡ್ಡಾಯಗೊಳಿಸುವ ನಿಯಮ ಮುಂದಿನ ಸಂಪುಟ ಸಭೆಯಲ್ಲಿ ಅಂಗೀಕಾರವಾಗಲಿದೆ ಎಂದು ತಿಳಿಸಿದರು. ಪ್ರಸ್ತುತ ತೆಲಂಗಾಣದಲ್ಲಿ ೧ರಿಂದ ೧೦ನೇ ತರಗತಿವರೆಗಷ್ಟೇ ತೆಲುಗು ಕಡ್ಡಾಯವಿದೆ.

ತೆಲಂಗಾಣ ಮುಖ್ಯಮಂತ್ರಿ ಚಂದ್ರಶೇಖರ್ ರಾವ್ ಘೋಷಣೆ

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 393
ದೂರವಾಣಿ: 2425156

Thursday 14 September 2017
ಆಂದೋಲನ
ಅಂತರ ಜಾಲ ವಿಳಾಸ
andolana.epapertoday.com
ಸುದ್ದಿಗಾಗಿ
andolana@gmail.com

22 ಕ್ಯಾರೆಟ್ ಚಿನ್ನದ ದರ
ತೊಳಸಿ
THOLASI JEWELS
₹2800
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926